

ಹೃದಯ ಘಾಸಿಗೊಳಿಸುತ್ತಿತ್ತು. ರಾತ್ರಿಯೆಲ್ಲ ಸರಿಯಾಗಿ ನಿದ್ದೆನೂ ಮಾಡದೆ ಹೇಗಾದ್ರು ಮಾಡಿ ಅವನಿಗೆ ಬುದ್ಧಿ ಕಲಿಸಿ, ಎದೆ ಮೆಟ್ಟುಸ್ತಂಗೆ ಬಾಳಿ ತೋರುಸ್ಬೇಕು ಎಂಬುದೇ ಹನುಮಪ್ಪನ ಗುರಿಯಾಗಿತ್ತು.

ಹನುಮಪ್ಪ ಕಲ್ಲಳ್ಳಿಯ ಮಣೆಗಾರಟ್ಟಿಯವನು. ಒಂಬತ್ತನೇ ತರಗತಿವರೆಗೆ ಓದಿಕೊಂಡು ಶಾಲೆ ಬಿಟ್ಟಿದ್ದ ಸ್ವಾಭಿಮಾನಿ. ಇದ್ದ ಎರಡೂವರೆ ಎಕರೆ ಪಿತ್ರಾರ್ಜಿತ ಖುಷ್ಕಿ ಜಮೀನಿನಲ್ಲಿ ಬೇಸಾಯ ಮಾಡಿಕೊಂಡು ಕಡ್ಲೆಕಾಯಿ, ರಾಗಿ, ತೊಗರಿ ಹೀಗೆ ಅದು ಇದು ಮಳೆ ನಂಬಿಕೊಂಡು ಬೆಳೆ ಬೆಳಕೊಂಡು ಹಟ್ಟೀಲಿ ನಾಲರು ಒಪ್ಪೊ ರೀತಿ ಬದುಕು ಕಟ್ಟಿಕೊಂಡವನು. ಇಂತ ಹನುಮಪ್ಪಂಗೆ ನೋಡಲಿಕ್ಕೆ ಒಸಿ ಚೆನ್ನಾಗಿರುವ ಹೆಂಡತಿ ಸಾಕಮ್ಮ ಕೂಡ ಮನೆ ಮಠ ಎಂದು ಮನೆಯ ಸ್ಥಿತಿಗತಿಯ ಸುಸ್ಥಿತಿಗೆ ಗಂಡನಿಗೆ ಭುಜಕೊಟ್ಟವಳು. ಇವರ ಸುಖ ಸಂಸಾರಕ್ಕೆ ಎರಡು ಮುದ್ದಾದ ಹೆಣ್ಣು, ಗಂಡು ಮಕ್ಕಳು ಕೂಡ ಇವರ ಕುಟುಂಬಕ್ಕೆ ಸೇರಿಕೊಂಡಿಕೊಂಡಿದ್ದವು. ಇಂತಹ ಸಂಸಾರದಲ್ಲಿ, ತೋಟದ ಮನೆ ನಂಜಪ್ಪ ಮೊನ್ನೆದಿನ ಹೆಂಡತಿ ಜಾತ್ರೆಗೆ ತೌರಮನಿಗೆ ಹೋಗಿದ್ದಾಗ ಅವತ್ತು ಹಟ್ಟೀಗೆ ಕೂಲಿ ಕರಿಯೋಕೆ ಬಂದಾತ ಮೂರೆಣ್ಣಾಳು ಕರದು ತನ್ನ ಮೊಟ್ರು ಬೈಕ್‌ನಲ್ಲಿ, ‘ಸಾಕಮ್ಮ ನೀನು ನನ್ನ ಹಿಂದುಕ್ಕೆ ಕೂತ್ಕ ಅವರಿಬ್ಬರು ನಿನ್ನ ಹಿಂದುಕ್ಕೆ ಕೂತ್ಕಳ್ಳಲಿ’ ಎಂದು ಬಲವಂತ ಮಾಡಿದಾಗ ಇವರು ‘ನಾವು ಮೂರ್ಜನವು ನಡ್ಕೊಂಡೇ ಬರ್ತಿವಿ ಕಾಣಣ್ಣ ನೀನೋಗಿರು’ ಎಂದೇಳಿದರು ಬಿಡದೆ, ‘ಇಲ್ಲ ಲೇಟಾಗುತ್ತೆ ಬರ್ರಿ ಬರ್ರಿ’ ಎಂದು ಹನುಮಪ್ಪನ ಹೆಂಡ್ತಿ ಸಾಕಮ್ಮನ ಹಿಂದುಕ್ಕೆ ಕೂರಿಸಿಕೊಂಡು, ಆಕೆ ಹಿಂದಕ್ಕೆ ಒತ್ತೊತ್ತಾಗಿ ಅವರಿಬ್ರುನು ಕೂರಿಸಿಕೊಂಡು ಬಂದು ಕಳೆ ತಗಿಯಾಕೆ ಹೊಲಕ್ಕೆ ಬಿಟ್ಟಿದ್ನಂತೆ. ಅಲ್ಲಿಗೆ ಸುಮ್ನಾಗದ ನಂಜಪ್ಪ ಕಳೆ ತೆಗಿತಿದ್ದಾಗ ಸಾಕಮ್ಮನ ಹಿಂದೆ ನಿಂತ್ಕಂಡು ಸಣ್ಣ ಸಣ್ಣ ಕಲ್ಲಿಂದ ಆಕೆ ಮೈ ಮೇಲೆ ಎಸೆದು ವಾರೆಗಣ್ಣು ಮಾಡ್ತಿದ್ದನ್ನ ಸಾಕಮ್ಮ ನೋಡಿ ಸುಮ್ಮನೇಯಿದ್ದು ಅವತ್ತು ರಾತ್ರಿಯೇ ತನ್ನ ಗಂಡನಿಗೆ ನಡೆದಿದ್ದನ್ನು ಹೇಳಿದಾಗ ಮರುದಿನ ಹನುಮಪ್ಪ ನಂಜಪ್ಪನ ತೋಟತ್ತಾವೆ ಹೋಗಿ ಕೆಲಸ ಮಾಡೋ ಹೆಣ್ಣಾಳು ಗಂಡಾಳುಗಳ ನಡುವೆಯೇ ಇದ್ದ ನಂಜಪ್ಪನಿಗೆ ತನ್ನೆಂಡತಿಗೆ ಮಾಡಿದ ಅವಮಾನವನ್ನ ಪ್ರಶ್ನೆ ಮಾಡಿದ್ದಕ್ಕೆ ಆತ ‘ಹೋಗಲೇ....... ತಿರಬೋಕಿ ಹನುಮ ಅವಳು ಹೇಳಿದ್ಲಂತೆ ಇವನು ಬಂದು ಅಳ್ಳಾಡುಸ್ತವನೆ ಯಾವನಿಗೆ ಹೇಳ್ತಿದಿಯಲಾ, ಕೂಲಿ ಮಾಡೋರು ಕೂಲಿಯಂಗೆ ಇರಬೇಕು, ಎಲ್ಲೋ ನಿಮ್ಮ ತಾತ ಬಿಟ್ಟೋಗಿರೋ ಎರಡೆಕರೆ ಇಟ್ಕಂಡ್.